ನಾಳೆಯಂತೂ ನನಗೆ ದುಡ್ಡು ಬೇಕೇ ಬೇಕು.'' ಎನ್ನುತ್ತಾ ಕಿಲಾತ ಗೊಣಗತೊಡಗಿದರೂ ಬವ್ತೀಸನ ಮುಖದ ಮೇಲೆ ಯಾವುದೇ ಬದಲಾವಣೆಗಳು ಆಗಲಿಲ್ಲ. ಸದಾ ದುಡ್ಡಿನ ಅಡಚಣೆಯಲ್ಲಿದ್ದ ಅವನಿಗೆ ಹಣ ಬಾಕಿ ಉಳಿಸುವುದು ಹೊಸತಾಗಿರಲಿಲ್ಲ. ಯಾರು ಏನು ಹೇಳಿದರೂ ಅವನು ಬೇಜಾರು ಮಾಡಿಕೊಳ್ಳುತ್ತಿರಲಿಲ್ಲ.

ಗ್ಲೋರಿಯ ಮತ್ತು ಜೊಯೆಲ್ ಇಬ್ಬರೂ ಸೇರಿ ಮನೆಯ ಕಾಂಪೌಂಡಿನ ಬಳಿ ಮಡಚಿಟ್ಟಿದ್ದ ಟಾರ್ಪಾಲನ್ನು ಬಿಡಿಸಿ ಮಣ್ಣಿನ ರಾಶಿಯ ಮೇಲೆ ಮುಚ್ಚಿ ಅದರ ಮೇಲೆ ಮಡಲುಗಳನ್ನು ಒಟ್ಟಿದರು.

ಸಿಟ್ಟಿನಿಂದ ಬುಸುಗುಡುತ್ತಾ ಕಿಲಾತ ಗಾಡಿ ಏರಿ ಹೊರನಡೆಯುತ್ತಿದ್ದಂತೆ ಬವ್ತೀಸ ಗೇಟನ್ನು ಎಳೆದು ಬಂದ.

ಕತ್ತಲಾಗುತ್ತಾ ಬಂದಿದ್ದರಿಂದ ಇಮಾಜುಗಳನ್ನು ತಯಾರಿಸಲು ಸಾಧ್ಯವಿರಲಿಲ್ಲವಾದ್ದರಿಂದ ಬವ್ತೀಸ ಸ್ನಾನ ಮಾಡಲು ಒಳಗೆ ಹೋದ.

★★★

ಹಿಂದಿನಿಂದಲೂ ಬವ್ತೀಸನ ಹಿರಿಯರು ಇಮಾಜುಗಳನ್ನು ಮಾಡಿಕೊಂಡು ಬಂದಿದ್ದು ಆ ವೃತ್ತಿಯಲ್ಲೇ ನಿಷ್ಣಾತರಾಗಿದ್ದರು. ಸ್ಥಳೀಯವಾಗಷ್ಟೇ ಅಲ್ಲದೆ ದೂರ ದೂರದ ಊರುಗಳಲ್ಲಿನ ಕ್ರೈಸ್ತ ಸಮುದಾಯಗಳಲ್ಲೂ ಅವರು ಹೆಸರುವಾಸಿಯಾಗಿದ್ದರು. ಜನರು ಅವರಿಗೆ 'ಇಮಾಜಿ ಪಿಂಟೊ'ಗಳೆಂದೇ ಕರೆಯುತ್ತಿದ್ದರು. ಬವ್ತೀಸನ ಅಜ್ಜ ಹೇಳಿದಂತೆ ಅವನ ಮುತ್ತಜ್ಜಂದಿರ ಕಾಲದಲ್ಲಿ ಯುರೋಪಿನಿಂದ ಬಂದಿದ್ದ ಬಿಳಿಯ ಬಿಳಿಯ ಧರ್ಮಪ್ರಚಾರಕರು ಅವರನ್ನೆಲ್ಲಾ ಕ್ರೈಸ್ತ ಧರ್ಮಕ್ಕೆ ಮತಾಂತರಿಸಿದ್ದರು. ಎಲ್ಲರ ಮನೆಯಲ್ಲೂ ಒಂದೊಂದು ದೇವರ ಪೀಠ. ಆ ಪೀಠದೊಳಗೆ ನಾನಾ ಇಮಾಜುಗಳನ್ನು ಇಡುವ ಸಂಪ್ರದಾಯ ಶುರುವಾಯಿತು. ಕ್ಯಾಥೋಲಿಕ್ ಕ್ರೈಸ್ತರ ನೂರಾರು ಸಂತರು ಜನರನ್ನು ಆಕರ್ಷಿಸತೊಡಗಿದರು. ತಮ್ಮೊಳಗೆ ಹುದುಗಿದ್ದ ಮೂರ್ತಿಗಳನ್ನು ರಚಿಸುವ ಕಲೆಯನ್ನು ಅವನ ಪೂರ್ವಜರು ಬಳಸಿಕೊಂಡು ಅದನ್ನೇ ತಮ್ಮ ವೃತ್ತಿಯನ್ನಾಗಿ ಆರಿಸಿಕೊಂಡರು.

ಇಸಿದೊರ್ ಸಿಂಪ್ಸನ್ ಎಂಬ ಬಿಳಿಯ ಪಾದ್ರಿ ಅವರಿಗೆ ಇಮಾಜುಗಳನ್ನು ರಚಿಸಲು ಯುರೋಪಿಯನ್ ತಂತ್ರ ಮತ್ತು ಕೌಶ್ಯಲ್ಯಗಳನ್ನು ಕಲಿಸಿದರೆಂದು ಹೇಳುತ್ತಾರೆ.

ಇಮಾಜುಗಳನ್ನು ರಚಿಸುವುದೆಂದರೆ ಪಿಂಟೊ ಮನೆತನದವರಿಗೆ ಎಡಗೈಯಲ್ಲಿ ಮಾವಿನ ಹಣ್ಣು ತಿನ್ನುವಷ್ಟೇ ಸಲೀಸಿನ ಕೆಲಸವಾಗಿತ್ತು. ಕ್ರಿಸ್ಮಸ್ ಗೋದಲಿಯೊಳಗೆ ಇಡುವ ಪುಟ್ಟ ಪುಟ್ಟ ಕುರಿಮರಿಗಳಾಗಲಿ, ಇಗರ್ಜಿಗಳ ಪೀಠಗಳ ಮೇಲೆ ಇಡುವ ದೊಡ್ಡ ದೊಡ್ಡ ಇಮಾಜುಗಳನ್ನು ಅವರು ಸುಲಭವಾಗಿ ಮತ್ತು ನಾಜೂಕಾಗಿ ರಚಿಸುವ ಕಲೆಯನ್ನು ಸಿದ್ಧಿಸಿಕೊಂಡಿದ್ದರು.

''ಇಮಾಜುಗಳು ಚೆನ್ನಾಗಿರಬೇಕೆಂದರೆ ಅವುಗಳನ್ನು ಮಾಡಲು ಬಳಸುವ ಮಣ್ಣೂ ಚೆನ್ನಾಗಿರಬೇಕು ಮತ್ತು ಹದವಾಗಿ ಕಲಸಿರಬೇಕು. ಅಂದರೆ ಮಣ್ಣಿನ ಹಲ್ವದಂತಿರಬೇಕು...'' ಎಂದು ಅವರು ಹೇಳುವುದಿತ್ತು. ''ಹದವಾಗಿ ಕಲಸಿದ ಮಣ್ಣಿನಿಂದ ಪೊರಕೆ ಕಡ್ಡಿಗಳನ್ನೂ ಮಾಡಬಹುದು! ಹಾಗೆ ಮಾಡಿದ ಕಡ್ಡಿಗಳನ್ನು ಬಾಗಿಸಿದರೂ ಒಡಕು ಕಾಣಿಸಬಾರದು. ಅಂತಹ ಮಣ್ಣಿಗೆ ಇಮಾಜಿಯ ಮಣ್ಣು ಎನ್ನುತ್ತಾರೆ...'' ಹಾಗೆ ಹೇಳುವಾಗ ಅವರ ಬಾಯಿಂದ ಮಂಗಳೂರು ಹಲ್ವ ತಿಂದಂತೆಯೇ ನೀರು ಒಸರುತ್ತಿದ್ದುದ್ದು ನಿಜ!

ವಿವಿಧ ರೂಪುಗಳ ಇಮಾಜುಗಳನ್ನು ರಚಿಸಿ, ಅವುಗಳನ್ನು ಹದವಾಗಿ ಗೂಡೊಲೆಯಲ್ಲಿ ಬೇಯಿಸಬೇಕಿತ್ತು. ಹೀಗೆ ಬೇಯಿಸಿದ ಇಮಾಜುಗಳನ್ನು ಹೊರತಗೆದು ತಣ್ಣಗಾದ ಮೇಲೆ ಬೇಕಾದ ಬಣ್ಣಗಳನ್ನು ಹಚ್ಚಿದ ಮೇಲೆ ಅವು ಜೀವತಳೆದಂತೆ ಕಾಣಿಸುತ್ತಿದ್ದವು. ಭಕ್ತರಿಗೆ ತಾವು ಆರಾಧಿಸುವ ದೇವರ ರೂಪ ಇಮಾಜುಗಳಲ್ಲಿ ಕಂಡರೆ, ಸಂತರನ್ನು ಪ್ರತ್ಯಕ್ಷವಾಗಿ ಕಂಡಂತಾಗುತ್ತಿತ್ತು. ಇದುವೇ